

ಬಹುರಾಷ್ಟ್ರೀಯ ಕಂಪನಿಗಳು ಮುತ್ತಿಗೆ ಹಾಕಿ ಜಯಿಸಿದ್ದವು. ಸರ್ಕಾರಗಳು ಕಣ್ಣು ಮುಚ್ಚಿ ಹಾಲು ಕುಡಿಯುತ್ತಿದ್ದವು. ಸ್ಮಾರ್ಟ್ ಸಿಟಿಗಳು ತಲೆ ಎತ್ತುತ್ತಿದ್ದವು. 'ಇಂದೇ ಬನ್ನಿ... ಒಂದು ವರ್ಷದಲ್ಲೇ ನಿಮ್ಮ ಕನಸಿನ ಮನೆಯ ಕಟ್ಟಿಸಿಕೊಡುತ್ತೇವೆ. ಸುಮ್ಮನೆ ಕೇಳಿದಲ್ಲಿ ಸಹಿಮಾಡಿ... ಕಂತಿನಲ್ಲಿ ಹಣ ಪಾವತಿಸಲು ಬ್ಯಾಂಕುಗಳು ಸಾಲ ನೀಡುತ್ತವೆ. ತುರ್ತು ಎಂದರೆ ಒಂದೇ ದಿನದಲ್ಲಿ ಅಪಾರ್ಟ್‌ಮೆಂಟಲ್ಲಿ ಬೇಕಾದ ಮನೆಯ ಆಯ್ಕೆ ಮಾಡಿಕೊಳ್ಳಿ. ಏನನ್ನೂ ಖರೀದಿಸಬೇಕಾದ್ದಿಲ್ಲ. ಸುಸಜ್ಜಿತ ಸಿದ್ಧಮನೆ. ಬೇಕಾದ್ದೆಲ್ಲ ಮನೆಯ ಒಳಗೇ ನಿಮ್ಮ ಬಜೆಟ್‌ಗೆ ತಕ್ಕಂತೆ ಅಲಂಕಾರ ಮಾಡಿ, ಕೈಗೆ ಕೀ ಕೊಡುತ್ತೇವೆ... ಇಂದೇ ಬನ್ನಿ' ಎಂದು ತರಾವರಿ ಕಂಪನಿಗಳು ಹೆದ್ದಾರಿ, ಕಿರುದಾರಿ ಉದ್ದಕ್ಕೂ ಬೋರ್ಡು ಹಾಕಿದ್ದರು. ಭರಾಟೆಯ ವ್ಯಾಪಾರ ನಡೆದಿತ್ತು. ಗಣಿ ಉದ್ಯಮದಿಂದ ಚಿಲ್ಲರೆ ಕಾಸಿನವರು ಎರಡು ಸಾವಿರ ರೂಪಾಯಿಗಳ ಗಾಂಧಿ ಫೋಟೊದ ನೋಟನ್ನು ಸಲೀಸಾಗಿ ಮುಟ್ಟಬಹುದಿತ್ತು. ದೇಶದ ಮೂಲೆ ಮೂಲೆಗಳಿಂದ ಬಂದ ವಲಸಿಗರು ಇದೇ ತಮಗೆ ತಕ್ಕ ನೆಲೆ ಎಂದು ನಿವೇಶನಗಳ ಖರೀದಿಯಲ್ಲಿ ತುದಿಗಾಲಲ್ಲಿದ್ದರು. ನಗರದ ಆಚೆಗಿನ ಕೃಷಿ ಭೂಮಿಗಳೆಲ್ಲ ನಿವೇಶನಗಳಾಗಿ ಬಹಳ ದಿನಗಳ ಹಿಂದೆಯೇ ಪರಿವರ್ತನೆಯಾಗಿ; ಅಲ್ಲಿ ರಸ್ತೆ, ವಿದ್ಯುತ್, ನೀರು ಇತ್ಯಾದಿ ಕಾಮಗಾರಿಗಳು ಭರದಿಂದ ಸಾಗಿದ್ದವು.

ತುಂಬಾ ತಳಜಾತಿಯವರೇ ಸಾವಿರಾರು ವರ್ಷಗಳಿಂದ ಬರಗಾಲದ ಶೋಷಣೆಗೆ ಒಳಗಾಗಿ; ಭೂ ಮಾಲೀಕರ ಮುಷ್ಠಿಯಲ್ಲಿದ್ದವರು ಗಣಿ ಉದ್ಯಮ ತಂದ ಬದಲಾವಣೆಯಿಂದ ನಿರಾಳವಾಗಿ ಕಾರ್ಖಾನೆಗಳ ಹೊಸ ಜೀತಕ್ಕೆ ಒಗ್ಗಿದ್ದರು. ಹೇಸಿಗೆಯ ಸ್ಲಂ ಬಿಟ್ಟು ದೂರ ಒಂದು ಪುಟ್ಟ ಮನೆ ಕಟ್ಟಿಕೊಳ್ಳಲು ಅವರೂ ಕನಸು ಕಾಣುತ್ತಿದ್ದರು. ಹಣ ಎಂಬ ರಾಕ್ಷಸ ಎಲ್ಲರ ಜೇಬಿಗೂ ಬಂದು ಬಂದು ಬೀಳುತ್ತಿದ್ದ. ಒಬ್ಬ ದರಿದ್ರ ಭಿಕ್ಷುಕ ಒಂದು ಹೋಟೆಲ್ ಮುಂದೆ ಸುಮ್ಮನೆ ಕೈ ನೀಡಿ ನಿಂತರೂ ಆ ಹಣ ಎಂಬ ರಕ್ಕಸ ಸಾವಿರಾರು ರೂಪಾಯಿಗಳನ್ನೇ ಜೇಬಿಗೆ ತುಂಬಿಸುತ್ತಿದ್ದ. ಝಣ ಝಣ ಝಣತ್ಕಾರ ಕಾಲಿಗೆ ಸಿಕ್ಕವರ ಈಗ ತುಳಿಯುತ್ತಿರಲಿಲ್ಲ. ಎಲ್ಲರ ಕೈಯಲ್ಲೂ ಸಾವಿರ ಸಾವಿರ ನೋಟುಗಳು. ನೈಸರ್ಗಿಕ ಸಂಪತ್ತು ದುರುಪಯೋಗವಾಗುತ್ತಿದೆ ಎಂಬ ಯಾವ ಎಚ್ಚರವೂ ಅವರಿಗೆ ಇರಲಿಲ್ಲ. ಹಣ ಬಹಳ ಅಪಾಯಕಾರಿ... ಅದರಷ್ಟು ಹೇಸಿಗೆ ಇನ್ನೊಂದಿಲ್ಲ. ಜನಕ್ಕೆ ಅದೇ ಬೇಕಾಗಿದೆಯಲ್ಲ... ಹಣವಿಲ್ಲದ ಜಗತ್ತು ಹೇಗಿರಬಹುದು ಎಂದು ಕನಸಿಲ್ಲಿ, ಏನೇನೊ ಕನವರಿಸುತ್ತ ಆ ಸಭ್ಯ ಬಡಬಡಿಸುತ್ತಿದ್ದ. ಹೆಂಡತಿ ಗದರಿದ ಮೇಲೆ ಕೂಡಲೇ ಸದ್ದಡಗುತ್ತಿದ್ದ.

ಎಚ್ಚರವಾಗಿತ್ತು ಅವನಿಗೆ. ಎದ್ದು ಕೂತ. ಆ ರಾತ್ರಿಯೇ ಹೆಂಡತಿಯ ಜೊತೆ ಬಲವಾದ ಜಗಳವಾಗಿತ್ತು. ನನ್ನ ಮಗಳ ಹುಡುಕಿ ಕರೆತಂದೆಯೋ ಸರಿ... ಇಲ್ಲ ಎಂದರೆ ನೀನೂ ಬೇಡ, ನಿನ್ನ ಸಂಸಾರವೂ ಬೇಡ... ನಿನ್ನ ಕೊಂದು ನಾನು ಸಾಯುವೆ ಎಂದು ಅಬ್ಬರಿಸಿದ್ದಳು. ಅಕ್ಕಪಕ್ಕದ